<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ</u>

CC No.:- 701/2022
C.W.:-1
P.W.:-1

ಸಾಕ್ಷಿದಾರರ ಹೆಸರು : ಕಲ್ಲಪ್ಪಾ ಮಹಾದೇವ ದೊಡಮನಿ
ವಯಸ್ಸು : 51 ವರ್ಷ
ಉದ್ಯೋಗ : ಒಕ್ಕಲುತನ
ಸಾಕೀನ : ಉಮರಾಣಿ

<u>ಸಾಕ್ಷಿಗೆ ಈ ದಿನ ದಿಃ 11-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು</u>
<u>ಮುಖ್ಯ ವಿಚಾರಣೆ ಸ ಸ ಅ ರವರಿಂದಃ-</u>

ಚಾಸಾ 6 ರವರು ನನಗೆ ಅಣ್ಣ ಆಗಬೇಕು. ಚಾಸಾ 7 ನನ್ನ ಅಣ್ಣನ ಮಗ ಆಗಬೇಕು. ಮೃತ ಮಹಾದೇವ ಮಲ್ಲಪ್ಪಾ ದೊಡಮನಿ ನನಗೆ ತಂದೆ ಆಗಬೇಕು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಮುಂಚೆ ನೋಡಿರುವುದಿಲ್ಲ. ನನಗೆ ಪ್ರಸ್ತುತ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೋತ್ತಿಲ್ಲ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು. ನಿಪಿ 1ಕ್ಕೆ ನಾನು ಪೋಲಿಸರ ಕೋರಿಕೆ ಮೇರೆಗೆ ಪೋಲಿಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ವಿಚಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಮರು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸಸಅ ರವರಿಂದಃ</u>

ದಿಃ 29-01-2022 ರಂದು ಬೆಳಗ್ಗೆ 6.25 ಗಂಟೆ ಸುಮಾರಿಗೆ ನಾವೆಲ್ಲರೂ ಮನೆಯಲ್ಲಿ ಇದ್ದು, ನಾನು ಮನೆಯಲ್ಲಿ ಜೋಳ ಕಡೆಯಲು ಹೋಗುತ್ತಿದ್ದು ನಮ್ಮ ತಂದೆ ನಿಪ್ಪಾಣಿ ಬರುವ ರಸ್ತೆಯಲ್ಲಿ ಬಹಿರ್ದೆಸೆಗೆ ಹೋಗಿದ್ದರು ಎಂದರೆ ಸರಿ ಅಲ್ಲ. ಹಾಗೂ ಒಮ್ಮೆಲೇ ರಸ್ತೆಯ ಮೇಲೆ ಅಪಘಾತ ಸಪ್ಪಳ ಕೇಳಿ ನಾನು ಚಾಸಾ 6 ಮತ್ತು 7 ಓಡಿ ಹೋಗಿ ನೋಡಲು ನಮ್ಮ ತಂದೆ ಮೃತ ಮಹಾದೇವ ಮಲ್ಲಪ್ಪಾ ದೊಡಮನಿ ಇವರು ರಸ್ತೆಯ ಮೇಲೆ ಬಿದ್ದಿದ್ದು ಅವರಿಗೆ ನಾಗರಮುನ್ನೋಳಿ ಕಡೆಯಿಂದ ಚಿಕ್ಕೋಡಿ ಹೋಗುವ ಕಾರ ನಂ. ಕೆ ಎ 23 ಪಿ 0402 ನೇದ್ದು ಹಾಯ್ದು ಅಪಘಾತವಾದದ್ದು ಎಂದರೆ ಸರಿ ಅಲ್ಲ. ಅವರಿಗೆ ತಲೆಗೆ ಪೆಟ್ಟಾಗಿ ಮೂಗಿನಿಂದ, ಬಾಯಿಂದ ರಕ್ತ ಬರುತ್ತಿದ್ದು ಅವರ ಎಡಗೈಗೆ ಮತ್ತು ಮೊಣಕಾಲಿಗೆ ಕೆತ್ತಿದ ಗಾಯಗಳು ಆಗಿದ್ದವು ಮತ್ತು ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿ ಅಲ್ಲ. ಆಗ ಕಾರ ಚಾಲಕನ ಹೆಸರು ಕೇಳಲು ಅವನ ಹೆಸರು ಕೃಷ್ಣಾ ಮಾರುತಿ ಕುಪ್ಪವಾಡ ಎಂದು ತಿಳಿಸಿದ ಎಂದರೆ ಸರಿ ಅಲ್ಲ. ಅಲ್ಲಿಂದ ನಾವು ಅದೇ ಕಾರಿನಲ್ಲಿ ಕಾರು ಚಾಲಕ ಮತ್ತು ನಾವು ಕೂಡಿ ನಮ್ಮ ತಂದೆಗೆ ಚಿಕ್ಕೋಡಿ ಸರ್ಕಾರಿ ಆಸ್ಪತ್ರೆಗೆ ತಂದು ದಾಖಲು ಮಾಡಿದ್ದು ಅಲ್ಲಿ ವೈದ್ಯರು ನಮ್ಮ ತಂದೆಗೆ ಉಪಚಾರ ಮಾಡುವ ಕಾಲಕ್ಕೆ ಬೆಳಿಗ್ಗೆ 9 ಗಂಟೆಗೆ ಉಪಚಾರ ಫಲಿಸದೆ ಅವರು ಮೃತ ಪಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಅಪಘಾತ ಮಾಡಿದ ಕಾರು

ದುಡುಕಿನಿಂದ ಮತ್ತು ನಿರ್ಲಕ್ಷ್ಯತೆಯಿಂದ ರಸ್ತೆ ಬದಿಯಿಂದ ಬಹಿರ್ದೆಸೆಗೆ ಹೋಗುವ ಸಲುವಾಗಿ ನಡೆದುಕೊಂಡು ಹೋಗುತ್ತಿದ್ದ ನಮ್ಮ ತಂದೆಗೆ ನೋಡದೇ ಅವರಿಗೆ ಹಿಂದಿನಿಂದ ಹಾಯಿಸಿ ಅವರಿಗೆ ಅಪಘಾತ ಪಡಿಸಿದ ಕೃಷ್ಣಾ ಮಾರುತಿ ಕುಪ್ಪವಾಡ ಮೇಲೆ ನಾನು ನಿಪಿ 1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿ ಅಲ್ಲ.

ದಿಃ 29-01-2022 ರಂದು ಈಗ ತಾವು ............. ಮುಟ್ಟಿರುತ್ತದೆ ಈ ಓದಿ ಹೇಳಿದ ರೀತಿಯಲ್ಲಿ ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ 2 ಎಂದು ಗುರುತಿಸಲಾಯಿತು. ಆರೋಪಿ ಜೋತೆಗೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಚಿಕ್ಕೋಡಿ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ**

CC No.:- 701/2022
C.W.:-6
P.W.:-2

ಸಾಕ್ಷಿದಾರರ ಹೆಸರು : ದುಂಡಪ್ಪಾ ಮಹಾದೇವ ದೊಡಮನಿ
ವಯಸ್ಸು : 52 ವರ್ಷ
ಉದ್ಯೋಗ : ಒಕ್ಕಲುತನ
ಸಾಕೀನ : ಉಮರಾಣಿ

ಸಾಕ್ಷಿಗೆ ಈ ದಿನ ದಿಃ 11-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ ಸ ಸ ಅ ರವರಿಂದಃ-

ಚಾಸಾ 1 ರವರು ನನಗೆ ಅಣ್ಣ ಆಗಬೇಕು. ಚಾಸಾ 7 ನನ್ನ ಮಗ ಆಗಬೇಕು. ಮೃತ ಮಹಾದೇವ ಮಲ್ಲಪ್ಪಾ ದೊಡಮನಿ ನನಗೆ ತಂದೆ ಆಗಬೇಕು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಮುಂಚೆ ನೋಡಿರುವುದಿಲ್ಲ. ನನಗೆ ಪ್ರಸ್ತುತ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಸಅ ರವರಿಂದಃ

ದಿಃ 29-01-2022 ರಂದು ಈ ದಿವಸ ............. ಹಾಜರಿದ್ದೇನು ಈ ಓದಿ ಹೇಳಿದ ರೀತಿಯಲ್ಲಿ ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ಆರೋಪಿ ಜೋತೆಗೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಚಿಕ್ಕೋಡಿ.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

CC No.:- 701/2022
C.W.:-8
P.W.:-3

ಸಾಕ್ಷಿದಾರರ ಹೆಸರು : ಅರುಣಕುಮಾರ ಗುರುಪಾದ ಪೂಜೇರಿ
ವಯಸ್ಸು : 32 ವರ್ಷ
ಉದ್ಯೋಗ : ಖಾಸಗಿ ಕೆಲಸ
ಸಾಕೀನ : ನಾಗರಮುನ್ನೋಳಿ

ಸಾಕ್ಷಿಗೆ ಈ ದಿನ ದಿಃ 11-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ ಸ ಸ ಅ ರವರಿಂದಃ-

ಚಾಸಾ 1 , 6 , 7 ರವರ ಪರಿಚಯ ಇಲ್ಲ. ಆರೋಪಿಯ ಪರಿಚಯ ಇದೆ. ನನಗೆ ಪ್ರಸ್ತುತ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ. ನಾನು ಕಾರಿನಲ್ಲಿ ಮಲಗಿದ್ದೆ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಸಅ ರವರಿಂದಃ

ದಿಃ 31-01-2022 ರಂದು ಮೊನ್ನೆಯ ದಿವಸ ದಿಃ29-01-2022 ............. ಮುಟ್ಟಿರುತ್ತದೆ ಎಂದು ಈಗ ಓದಿ ಹೇಳಿದ ರೀತಿಯಲ್ಲಿ ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿ ನನಗೆ ಪರಿಚಯ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಚಿಕ್ಕೋಡಿ.